## ಪ್ರಧಾನ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

**ಸಿ.ಸಿ ನಂಃ 44/2017**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ನಾಗಪ್ಪ | ಫ್ರಾಸಾಃ **16** |
| ತಂದೆಯ ಹೆಸರುಃ | ಸಾಬಣ್ಣ | ಚಾಸಾಃ **19** |
| ವಯಸ್ಸುಃ | **34** ವರ್ಷ | ದಿಃ **17-06-2026** |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಕೋಟಗೇರಾ ಗ್ರಾಮ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:

ನನಗೆ ಚಾಸಾಃ 1, 5 ರಿಂದ 18 ಹಾಗೂ 20 ರಿಂದ 27 ರವರ ಪರಿಚಯ ಇಲ್ಲ. ನನಗೆ 1 ಮತ್ತು 2 ಆರೋಪಿತರ ಪರಿಚಯ ಇದೆ, 3 ನೇ ಆರೋಪಿಯ ಪರಿಚಯ ಇಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)

ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ

1 ನೇ ಆರೋಪಿ ಸರಕಾರಿ ಶಿಕ್ಷಕರಾಗಿರುತ್ತಾರೆ ಎಂದರೆ ಸರಿ. 2009 ರಲ್ಲಿ 1 ನೇ ಆರೋಪಿ ಸುಷ್ಮ ಎಂಬುವವರೊಂದಿಗೆ ಮದುವೆ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ನಂತರ ಅವರುಗಳು ವಿವಾಹ ವಿಚ್ಚೇದನೆ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ 2012 ರಲ್ಲಿ 1 ನೇ ಆರೋಪಿ ಚಾಸಾಃ 1 ರವರನ್ನು ಮದುವೆಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ಮದುವೆ ಕಾರ್ಯಕ್ರಮಕ್ಕೆ ಹೋಗಿದ್ದೆನು ಎಂದರೆ ಸರಿಯಲ್ಲ.

ಸದರಿಯವರು ಎರಡು ವರ್ಷಗಳ ವರೆಗೆ ಚೆನ್ನಾಗಿದ್ದರು ಹಾಗೂ ಆ ನಂತರ 2 ನೇ ಆರೋಪಿ ಚಾಸಾಃ1 ರವರಿಗೆ ನೀನು ನೋಡಲು ಚೆನ್ನಾಗಿಲ್ಲ ಹಾಗೂ ನೌಕರಿ ಮಾಡುವುದಿಲ್ಲ ಎಂದು ಕಿರುಕುಳ ನೀಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಆರೋಪಿತರು ಹೆಚ್ಚಿನ ವರದಕ್ಷಣೆ ತರುವಂತೆ ಚಾಸಾಃ 1 ರವರಿಗೆ ಹೊಡಿ-ಬಡಿ ಮಾಡುತ್ತಿದ್ದರು ಎಂದರೆ

ನನಗೆ ಗೊತ್ತಿಲ್ಲ.  ನಂತರ ಹೆಣ್ಣು ಮಗು ಜನಿಸಿದ್ದು, 1 ಮತ್ತು 2 ನೇ ಆರೋಪಿತರು ಮಗು ನೋಡಲು ಹೋಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಂತರ ಚಾಸಾಃ 6 ರವರು ಚಾಸಾಃ1 ರವರನ್ನು ಆರೋಪಿತರ ಮನೆಗೆ ಕರೆದುಕೊಂಡು ಬಂದಾಗ ಆರೋಪಿತರು ಗಲಾಟೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ನಂತರ 1 ನೇ ಆರೋಪಿ ನನ್ನ ಮನೆಗೆ ಬಂದು ದಿನಾಂಕ 27.02.2016 ರಂದು ತಾನು 3 ನೇ ಆರೋಪಿಯೊಂದಿಗೆ ಚಿತ್ತಾಪೂರದ ನಾಗಾವಿ ಯಲ್ಲಮ್ಮ ಗುಡಿಯಲ್ಲಿ ಮದುವೆ ಮಾಡಿಕೊಳ್ಳುತ್ತಿರುವುದಾಗಿ ತಿಳಿಸಿದ್ದನು ಎಂದರೆ ಸರಿಯಲ್ಲ. ಆಗ ನಿನ್ನ ಹೆಂಡತಿ ಚಾಸಾ 1 ರವರು ಜೀವಂತ ಇರುವಾಗ ಬೇರೆ ಮದುವೆ ಹೇಗೆ ಮಾಡಿಕೊಳ್ಳುತ್ತೀಯಾ ಎಂದು ನಾನು ಆತನನ್ನು ಕೇಳಿದ್ದೆನು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ತಾನು ಚಾಸಾ 1 ರವರನ್ನು ಬಿಟ್ಟಿದ್ದು ನಮ್ಮ ಮಧ್ಯ ಯಾವುದೇ ಸಂಬಂಧ ಇರುವುದಿಲ್ಲ ಎಂದು ನನಗೆ ತಿಳಿಸಿದ್ದನು ಎಂದದೆ ಸರಿಯಲ್ಲ. ನಂತರ ನಾನು ಹಾಗೂ ಚಾಸಾ 18 ರವರು ದಿನಾಂಕ 27-02-2016 ರಂದು ನಾಗಾವಿ ಯಲ್ಲಮ್ಮ ಗುಡಿಯಲ್ಲಿ ನಡೆದ 1 ಮತ್ತು 3 ಆರೋಪಿತರ ಮದುವೆ ಕಾರ್ಯಕ್ರಮಕ್ಕೆ ಹೋಗಿದ್ದೆವು ಎಂದರೆ ಸರಿಯಲ್ಲ. ಆ ನಂತರ 1 ನೇ ಆರೋಪಿ 3 ನೇ ಆರೋಪಿಯನ್ನು ತನ್ನ ಮನೆಗೆ ಕರೆದುಕೊಂಡು ಬಂದಿದ್ದನು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 05-03-2016 ರಂದು ಅವರು ಜೇವರ್ಗಿಯ ಉಪನೋಂದಾಣಧಿಕಾರಿಗಳ ಕಚೇರಿಯಲ್ಲಿ ತಮ್ಮ ಮದುವೆ ನೊಂದಣಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಆರೋಪಿ ನಾಲವಾರ ಗ್ರಾಮದ ಪೌಢ ಶಾಲಾ ದೈಹಿಕ ಶಿಕ್ಷಕಿ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಂತರ 1 ನೇ ಆರೋಪಿಯ 2 ನೇ ಮದುವೆಯ ವಿಷಯ ತಿಳಿದು ದಿನಾಂಕ 10-06-2016 ರಂದು  ಚಾಸಾಃ 1 ಮತ್ತು 6 ರವರು ಆರೋಪಿತರ ಮನೆಗೆ ಬಂದು ಕೇಳಿದಾಗ 1 ರಿಂದ 3 ನೇ ಆರೋಪಿತರು ಅವರಿಗೆ ಹೊಡಿ-ಬಡಿ ಮಾಡಿ ಜೀವದ ಬೆದರಿಕೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿ ಹೇಳಿಕೆಯನ್ನು ನಿಪಿ-15 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಷಯ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ